# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 62 ಫ್ರಾ.ಸಾ. :47**

| | | |
|---|---|---|
| ಸಾಕ್ಷಿಯ ಹೆಸರು | : | ಡಾಃ ಗೀತಾ ಲಕ್ಷ್ಮೀ |
| ಗಂಡನ ಹೆಸರು | : | ಡಾಃ ಸತ್ಯಮೂರ್ತಿ ಕುಂಬ್ಳೆ |
| ವಯಸ್ಸು | : | 49 ವರ್ಷ |
| ಕೆಲಸ | : | ಸಹಾಯಕ ನಿರ್ದೇಶಕರು, ಜೀವಶಾಸ್ತ್ರ ವಿಭಾಗ<br>ಆರ್.ಎಫ್.ಎಸ್.ಎಲ್., ಮಂಗಳೂರು. |
| ವಾಸ | : | ಮಂಗಳೂರು |

**ದಿನಾಂಕಃ 14-11-2024 ರಂದು ಸಾಕ್ಷಿಯು ವಿ.ಸಿ ಮೂಲಕ ಹಾಜರಾಗಿದ್ದು, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. 2012 ರಿಂದ 2020 ಮಾರ್ಚ್ ವರೆಗೆ ನಾನು ಮಂಗಳೂರಿನ ಆರ್.ಎಫ್.ಎಸ್.ಎಲ್ ನಲ್ಲಿ ಜೀವಶಾಸ್ತ್ರ ವಿಭಾಗದಲ್ಲಿ ವೈಜ್ಞಾನಿಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ಹಾಗೂ 2020 ರಿಂದ ಇಲ್ಲಿಯ ವರೆಗೆ ಜೀವಶಾಸ್ತ್ರ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಇದುವರೆಗೂ ಸುಮಾರು 4500 ಕಲೆಗಳ ಪ್ರಕರಣಗಳಲ್ಲಿ ಹಾಗೂ 3500 ಸಿರಾಲೊಜಿ ಪ್ರಕರಣಗಳಲ್ಲಿ ಪರೀಕ್ಷೆಗಳನ್ನು ಮಾಡಿ, ವರದಿಗಳನ್ನು ನೀಡಿರುತ್ತೇನೆ ಹಾಗೂ ಇಲ್ಲಿಯ ವರೆಗೆ ಸುಮಾರು 1000 ಪ್ರಕರಣಗಳಲ್ಲಿ ನಾನು ಸಾಕ್ಷಿ ನೀಡಿರುತ್ತೇನೆ.

2. ದಿ. 15-11-2018 ರಂದು ಕಾರವಾರ ನಗರ ಪೊಲೀಸ್ ಠಾಣೆಯ ಗುನ್ನಾ ನಂ. 141/2018 ಕ್ಕೆ ಸಂಬಂಧಪಟ್ಟಂತೆ ಚಾಸಾ-41 ಪ್ರಶಾಂತ ಸಾವಂತ್ ರವರು ತಮ್ಮ ಮೇಲಾಧಿಕಾರಿಗಳ ಕೋರಿಕೆಯ ಪತ್ರದೊಂದಿಗೆ ಒಟ್ಟು 11 ಮೊಹರು ಮಾಡಿದ ವಸ್ತುಗಳನ್ನು ನಮ್ಮ ಪ್ರಯೋಗಾಲಯಕ್ಕೆ ತಂದಿದ್ದು, ಅದನ್ನು ನಮ್ಮ ಪ್ರಯೋಗಾಲಯದ ಸ್ವೀಕೃತಿ ವಿಭಾಗದವರು ಪಡೆದುಕೊಂಡು, ಅದೇ ದಿನ ನನಗೆ ನೀಡಿರುತ್ತಾರೆ. ನಾನು ಪಡೆದುಕೊಂಡ ವಸ್ತುಗಳನ್ನು ಪರಿಶೀಲಿಸಿ ನೋಡಿದಾಗ ಅವುಗಳು ಸುಸ್ಥಿತಿಯಲ್ಲಿ ಇದ್ದವು ಹಾಗೂ ಸದರಿ

ವಸ್ತುಗಳಿಗೆ ಹಾಕಿದ್ದ ಮೊಹರು ಸಹ ಮಾದರಿ ಮೊಹರಿಗೆ ತಾಳೆಯಾಗುತ್ತಿತ್ತು. ಸದರಿ ವಸ್ತುಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗಾಗಿ ತೆರೆದು ನೋಡಿದಾಗ, ಅವುಗಳಿಗೆ ತನಿಖಾಧಿಕಾರಿಗಳು ವಸ್ತು ಸಂಖ್ಯೆ 3, 5 ರಿಂದ 14 ಎಂದು ಗುರುತು ಮಾಡಿದ್ದರು. ವಸ್ತು ಸಂಖ್ಯೆ 3 ರಲ್ಲಿ ಪ್ಲಾಸ್ಟಿಕ್ ಕಂಟೇನರ್ ನಲ್ಲಿ ಸಂಗ್ರಹಿಸಿದ ರಕ್ತದ ಮಾದರಿ, ವಸ್ತು ಸಂಖ್ಯೆ 5 ರಲ್ಲಿ ಶವ ಬಿದ್ದ ಸ್ಥಳದ ಸುತ್ತಲಿನ ಮಣ್ಣಿನ ಮಾದರಿ, ವಸ್ತು ಸಂಖ್ಯೆ 6 ರಲ್ಲಿ ಶವದ ಕೆಳಗಡೆ ಇದ್ದ ಮಣ್ಣಿನ ಮಾದರಿ, ವಸ್ತು ಸಂಖ್ಯೆ 7 ರಲ್ಲಿ ಒಂದು ಅಂಡರ್ ವೇರ್, ವಸ್ತು ಸಂಖ್ಯೆ 8 ರಲ್ಲಿ ಒಂದು ಟೀ-ಶರ್ಟ್, ವಸ್ತು ಸಂಖ್ಯೆ 9 ರಲ್ಲಿ ಒಂದು ಬನಿಯಾನ್, ವಸ್ತು ಸಂಖ್ಯೆ 10 ರಲ್ಲಿ ಒಂದು ಕತ್ತಿ, ವಸ್ತು ಸಂಖ್ಯೆ 11 ರಲ್ಲಿ ಒಂದು ಪ್ಯಾಂಟ್, ವಸ್ತು ಸಂಖ್ಯೆ 12 ರಲ್ಲಿ ಒಂದು ಟೀ-ಶರ್ಟ್, ವಸ್ತು ಸಂಖ್ಯೆ 13 ರಲ್ಲಿ ಒಂದು ಬಂಗಾರದಂತೆ ಕಾಣುವ ಕತ್ತಿನ ಚೈನ್, ವಸ್ತು ಸಂಖ್ಯೆ 14 ರಲ್ಲಿ ಒಂದು ಪ್ಲಾಸ್ಟಿಕ್ ಬಾಟಲ್ ಇರುತ್ತವೆ. ಸದರಿ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿ ನೋಡಿದಾಗ, ವಸ್ತು ಸಂಖ್ಯೆ 5, 6, 7, 8, 9, 11, 12 ಮತ್ತು 14 ರಲ್ಲಿ ರಕ್ತದ ಕಲೆಗಳು ಕಂಡುಬಂದಿರುತ್ತದೆ. ವಸ್ತು ಸಂಖ್ಯೆ 3 ರಲ್ಲಿ ರಕ್ತದ ಮಾದರಿ ಇದ್ದು, ಸದರಿ ರಕ್ತದ ಮಾದರಿಯನ್ನು ಪರೀಕ್ಷೆಗೊಳಪಡಿಸಿದ ನಂತರ ದಿ.18-12-2018 ರಂದು ಮುಂದಿನ ಪರೀಕ್ಷೆಗಾಗಿ ನಮ್ಮ ಪ್ರಯೋಗಾಲಯದ ವಿಷ ವಿಜ್ಞಾನ ವಿಭಾಗಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ವಸ್ತು ಸಂಖ್ಯೆ 6 ರಲ್ಲಿ ಕೂದಲು ಕಂಡುಬಂದಿರಲಿಲ್ಲ.

3. ಮೇಲೆ ಹೇಳಿದಂತೆ ರಕ್ತದ ಕಲೆಗಳು ಕಂಡು ಬಂದ ವಸ್ತುಗಳನ್ನು ಸಿರಾಲೊಜಿ ಪರೀಕ್ಷೆಗಾಗಿ ಒಳಪಡಿಸಿದಾಗ, ವಸ್ತು ಸಂಖ್ಯೆ 8, 9 ಹಾಗೂ 14 ರಲ್ಲಿರುವ ರಕ್ತದ ಕಲೆಗಳು ಮಾನವ ರಕ್ತದ ಮೂಲದ್ದಾಗಿದ್ದು, "ಬಿ" ಗುಂಪಿಗೆ ಸೇರಿದ ರಕ್ತದ ಕಲೆಗಳಾಗಿರುತ್ತದೆ. ವಸ್ತು ಸಂಖ್ಯೆ 3 ರಲ್ಲಿರುವ ರಕ್ತದ ಮಾದರಿಯ ಗುಣಲಕ್ಷಣಗಳು ನಾಶವಾಗಿದ್ದರಿಂದ, ಅದರ ಮೂಲ ಹಾಗೂ ಗುಂಪನ್ನು ನಿರ್ಧರಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ವಸ್ತು ಸಂಖ್ಯೆ 5, 6, 7, 11 ಹಾಗೂ 12 ರಲ್ಲಿ ಸಾಕಷ್ಟು ಪ್ರಮಾಣದಲ್ಲಿ ರಕ್ತದ ಕಲೆಗಳು ಇಲ್ಲದಿದ್ದರಿಂದ, ಅವುಗಳ ಮೂಲ ಹಾಗೂ ಗುಂಪನ್ನು ನಿರ್ಧರಿಸಲು ಸಾಧ್ಯವಾಗಿರುವುದಿಲ್ಲ. ಮೇಲಿನ ವಸ್ತುಗಳನ್ನು ಪರೀಕ್ಷಿಸಿದ ಬಗ್ಗೆ ವರದಿಯನ್ನು ಮೊಹರಿನೊಂದಿಗೆ ಕಾರವಾರದ ಪೊಲೀಸರಿಗೆ ನೀಡಿರುತ್ತೇನೆ ಹಾಗೂ ನಾನು ಪರೀಕ್ಷೆಗೊಳಪಡಿಸಿದ ವಸ್ತುಗಳನ್ನು ಪುನಃ ಚೀಲದಲ್ಲಿ ಹಾಕಿ, ಅವುಗಳಿಗೆ ನಮ್ಮ ಪ್ರಯೋಗಾಲಯದ ಮೊಹರು ಮಾಡಿ ಅವುಗಳನ್ನೂ ಸಹ ಪೊಲೀಸರಿಗೆ ನೀಡಿರುತ್ತೇನೆ.

4. ಸಾಕ್ಷಿಯು ತಾವು ನೀಡಿರುವ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-122 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-122(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಮಾದರಿ ಮೊಹರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-126 ಎಂದು, ಸಾಕ್ಷಿಯ ಸಹಿಯನ್ನು ನಿಪಿ-126(ಎ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ವಸ್ತು ಸಂಖ್ಯೆ 5 ಶವದ ಸುತ್ತಲಿನ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-20 ಎಂದು ಗುರುತಿಸಲಾಗಿದೆ. ವಸ್ತು ಸಂಖ್ಯೆ 6 ಶವದ ಕೆಳಗಿನ ಮಣ್ಣನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-19 ಎಂದು ಗುರುತಿಸಲಾಗಿದೆ. ವಸ್ತು ಸಂಖ್ಯೆ 7 ಅಂಡರ್ ವೇರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-10 ಎಂದು ಗುರುತಿಸಲಾಗಿದೆ. ವಸ್ತು ಸಂಖ್ಯೆ 8 ಟೀ-ಶರ್ಟನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-9 ಎಂದು ಗುರುತಿಸಲಾಗಿದೆ. ವಸ್ತು ಸಂಖ್ಯೆ 9 ಬನಿಯಾನನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-8 ಎಂದು ಗುರುತಿಸಲಾಗಿದೆ. ವಸ್ತು ಸಂಖ್ಯೆ 10 ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-1 ಎಂದು ಗುರುತಿಸಲಾಗಿದೆ. ವಸ್ತು ಸಂಖ್ಯೆ 11 ಪ್ಯಾಂಟನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-3 ಎಂದು ಗುರುತಿಸಲಾಗಿದೆ. ವಸ್ತು ಸಂಖ್ಯೆ 12 ಟೀ-ಶರ್ಟನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-2 ಎಂದು ಗುರುತಿಸಲಾಗಿದೆ. ವಸ್ತು ಸಂಖ್ಯೆ 13 ಕತ್ತಿನ ಚೈನನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-4 ಎಂದು ಗುರುತಿಸಲಾಗಿದೆ, ವಸ್ತು ಸಂಖ್ಯೆ 14 ಪ್ಲಾಸ್ಟಿಕ್ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-13 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ-**

5. ನಮ್ಮ ಪ್ರಯೋಗಾಯಲಕ್ಕೆ ಮಾದರಿ ವಸ್ತುಗಳನ್ನು ತೆಗೆದುಕೊಂಡು ಬಂದ ಪೊಲೀಸ್ ಸಿಬ್ಬಂದಿಯ ಹೆಸರು ಪ್ರಶಾಂತ್ ಡಿ. ಸಾವಂತ್/ ಸಿ.ಹೆಚ್.ಸಿ.-1251 ಆಗಿರುತ್ತದೆ. ಸದರಿ

ಸಿಬ್ಬಂದಿಯ ಹೆಸರು ಹಾಗೂ ವಿವರವನ್ನು ನಮ್ಮ ಪ್ರಯೋಗಾಯಲದ ಸ್ವೀಕೃತಿ ವಿಭಾಗದವರು ನಮೂದಿಸಿರುತ್ತಾರೆ. ಶವ ಬಿದ್ದ ಸ್ಥಳದ ಕೆಳಗಡೆ ಮಣ್ಣಿನಲ್ಲಿ ಕೂದಲು ಇರುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿಯು, ನಮಗೆ ನೀಡಿದ ಮಣ್ಣಿನ ಮಾದರಿಯಲ್ಲಿ ಕೂದಲು ಇರುವುದಿಲ್ಲ ಎಂದು ನುಡಿಯುತ್ತಾರೆ. ಕೊಳೆತ ಸ್ಥಿತಿಗೆ ತಲುಪಿದ ಶವದ ಕೆಳಗಿನ ಮಣ್ಣಿನಲ್ಲಿ ಕೂದಲು ಸಿಗುವ ಸಾಧ್ಯತೆ ಇರುತ್ತದೆ ಎಂದರೆ ಸಾಕ್ಷಿಯು, ನಮಗೆ ನೀಡಿದ ಮಣ್ಣಿನ ಮಾದರಿಯಲ್ಲಿ ದೊರೆತಿರಲಿಲ್ಲ ಎಂದು ನುಡಿಯುತ್ತಾರೆ. ಶವದ ಸುತ್ತಲಿನ ಮಣ್ಣಿನ ಮಾದರಿಯಲ್ಲಿ ರಕ್ತದ ಕಲೆಗಳು ಕಂಡುಬಂದಿರುತ್ತದೆ. ವಸ್ತು ಸಂಖ್ಯೆ 5 ಮತ್ತು 6 ನ್ನು ಪರೀಕ್ಷೆಗೊಳಪಡಿಸಿದಾಗ, ಅದರಿಂದ ಫಲಿತಾಂಶ ಸಿಕ್ಕಿರಲಿಲ್ಲ. ಮನುಷ್ಯನ ರಕ್ತದೊಂದಿಗೆ ಪ್ರಾಣಿಗಳ ರಕ್ತ ಸೇರಿದಾಗ, ರಕ್ತದ ಮಾದರಿಯನ್ನು ಗುರುತಿಸಲು ಸಾಧ್ಯವಿರುತ್ತದೆ. ವಸ್ತು ಸಂಖ್ಯೆ 3 ರಲ್ಲಿ ಗುಣಲಕ್ಷಣಗಳು ನಾಶವಾಗಿದ್ದರಿಂದ, ರಕ್ತದ ಕಲೆಗಳು ಕಂಡುಬಂದ ವಸ್ತುಗಳಿಗೆ ತಾಳೆ ಮಾಡಲು ಸಾಧ್ಯವಾಗಿರುವುದಿಲ್ಲ. ವಸ್ತು ಸಂಖ್ಯೆ 11 ಮತ್ತು 12 ರಲ್ಲಿ ರಕ್ತದ ಕಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ವಸ್ತು ಸಂಖ್ಯೆ 11 ಮತ್ತು 12 ರಲ್ಲಿ ರಕ್ತದ ಕಲೆಗಳು ಇಲ್ಲದಿದ್ದರಿಂದ, ರಕ್ತದ ನಮೂನೆ ಮತ್ತು ಗುಂಪನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ಕಾರವಾರದ ಪೊಲೀಸರು ನಮ್ಮ ಪ್ರಯೋಗಾಲಯಕ್ಕೆ ಯಾವುದೇ ವಸ್ತುಗಳನ್ನು ಪರೀಕ್ಷೆಗಾಗಿ ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ, ಸುಳ್ಳು ವರದಿಯನ್ನು ತಯಾರಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಹೇಳಿಕೆಯನ್ನು ವಿಡಿಯೋ ಕಾನ್ಫರೆನ್ಸ ಮೂಲಕ ಪಡೆಯಲಾಯಿತು. ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ